# ಕಾಡಿ ಬೇಡಿದ್ದ ಕರಣ್



ಬಾಲಿವುಡ್‌ನ ರೊಮ್ಯಾಂಟಿಕ್ ಪ್ರೇಮ ಕಥೆಗಳ ಸಿನಿಮಾ ನಿರ್ದೇಶಕರಲ್ಲಿ ಮುಂಚೂಣಿಯಲ್ಲಿ ಕೇಳುವ ಹೆಸರುಗಳಲ್ಲಿ ಕರಣ್ ಜೋಹರ್ ಹೆಸರೂ ಒಂದು. ಕರಣ್ ನಿರ್ದೇಶನದ ಮೊದಲ ಸಿನಿಮಾ 'ಕುಚ್ ಕುಚ್ ಹೋತಾ ಹೇ' ಬಾಕ್ಸ್‌ಆಫೀಸ್ ಕೊಳ್ಳೆ ಹೊಡೆದಿದ್ದು ಇತಿಹಾಸ. ಶಾರುಖ್ ಮತ್ತು ಕಾಜಲ್ ಜತೆಗೆ ರಾಣಿ ಮುಖರ್ಜಿ ಹಾಗೂ ಸಲ್ಮಾನ್ ಖಾನ್ ಸಹ ಚಿಕ್ಕ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. ಆದರೆ ರಾಣಿ ಮತ್ತು ಸಲ್ಮಾನ್‌ರನ್ನು ಈ ಚಿತ್ರದಲ್ಲಿ ನಟಿಸುವಂತೆ ಮನವೊಲಿಸಲು ಹರಸಾಹಸ ಪಡಬೇಕಾಗಿತ್ತು ಎಂಬುದನ್ನು ಕರಣ್ ನೆನಪಿಸಿಕೊಂಡಿದ್ದಾನೆ.

ಚಿತ್ರದಲ್ಲಿ ನಾಯಕ–ನಾಯಕಿಯರಲ್ಲದ, ಅಲ್ಪಾವಧಿ ಕಾಣಿಸಿಕೊಳ್ಳುವ ಪಾತ್ರಗಳಿಗೆ ಹೆಸರು ಮಾಡಿದವರೇ ಬೇಕಿತ್ತು. ನಿರ್ಮಾಪಕ ಆದಿತ್ಯ ಚೋಪ್ರಾ ಮತ್ತು ನಾಯಕ ಶಾರುಖ್ ಇಬ್ಬರೂ ರಾಣಿಯ ಹೆಸರನ್ನು ಸೂಚಿಸಿದ್ದರು. ಆದರೆ ಆಕೆಯನ್ನು ಕರೆತರುವುದು ಕರಣ್‌ಗೆ ಅಷ್ಟು ಸುಲಭವಾಗಿರಲಿಲ್ಲ. ಬರೋಬ್ಬರಿ ಎಂಟು ಖ್ಯಾತ ನಟಿಯರನ್ನು ಕರಣ್ ಸಂಪರ್ಕಿಸಿದ್ದ. ಅವರಲ್ಲಿ ಒಬ್ಬರೂ ಹೀಗೆ ಬಂದು ಹಾಗೆ ಹೋಗುವ ಪಾತ್ರವೆಂದು ಒಪ್ಪಿಕೊಳ್ಳಲೇ ಇಲ್ಲ. 'ಆ ಪಾತ್ರವನ್ನು ಸೂಕ್ಷ್ಮವಾದ ರೊಮ್ಯಾಂಟಿಕ್ ಸ್ಪರ್ಶ ನೀಡಿ ಹೆಣೆದಿದ್ದೆ. ಹೀಗಿದ್ದೂ ಯಾರೂ ಸ್ಪಂದಿಸಲಿಲ್ಲ. ನಾನು ಎಲ್ಲರನ್ನೂ ಬೇಡಿ ಬೇಡಿ ಹೆಚ್ಚೂ ಕಡಿಮೆ ಭಿಕ್ಷುಕನಂತಾಗಿದ್ದೆ' ಎಂದು ಹೇಳಿಕೊಂಡಿದ್ದಾನೆ ಕರಣ್. 'ಗುಲಾಂ' ಚಿತ್ರೀಕರಣ ನಡೆಯುತ್ತಿದ್ದ ಜಾಗಕ್ಕೆ ಹೋಗಿ ರಾಣಿಗೆ ಮನವಿ ಮಾಡಿಕೊಳ್ಳುವುದು ಕರಣ್‌ನ ದಿನಚರಿಯ ಭಾಗವಾಗಿತ್ತಂತೆ. 'ರಾಜಾ ಕಿ ಆಯೇಗಿ ಬರಾತ್' ಚಿತ್ರದಲ್ಲಿ ರಾಣಿಯ ಭಾವಾಭಿನಯ ನೋಡಿದ್ದ ಅವರಿಗೆ ಅಂಥದ್ದೇ ಸೂಕ್ಷ್ಮವಾದ ಸನ್ನಿವೇಶ ನಿಭಾಯಿಸುವ ಪರಿಚಿತ ಮುಖ ಬೇಕಿತ್ತು. ಆರಂಭದಲ್ಲಿಯೇ ಸಾಯುವ ಪಾತ್ರವಾಗಿದ್ದರಿಂದ ರಾಣಿ ಸೇರಿದಂತೆ ಯಾವ ನಟಿಯೂ ಅದನ್ನು ಒಪ್ಪಿಕೊಂಡಿರಲಿಲ್ಲ.

ಅತಿಥಿ ಪಾತ್ರದಲ್ಲಿ ನಟಿಸಿರುವ ಸಲ್ಮಾನ್‌ನನ್ನು ಒಪ್ಪಿಸುವುದರಲ್ಲಿಯೂ ಕರಣ್ ಹೆಣಗಾಟ ಕಡಿಮೆ ಇರಲಿಲ್ಲವಂತೆ. ಸಲ್ಮಾನ್ ಹಿಂದೆಯೇ ಅಲೆದಾಡಿ ಆತನನ್ನು ಒಪ್ಪಿಸಿದ್ದನಂತೆ. ಅಂತಿಮವಾಗಿ ಸಲ್ಲು ಮತ್ತು ರಾಣಿ 'ಕುಚ್ ಕುಚ್ ಹೋತಾ ಹೇ'ದಲ್ಲಿ ನಟಿಸಿದರು.

ಈಗ ಆ ಚಿತ್ರವನ್ನು ಹೊಗಳಬಹುದು. ಕಲಾವಿದರನ್ನು ಕಾಡಿ ಬೇಡಿ ಒಪ್ಪಿಸಿದ ಆ ದಿನಗಳು ಈಗಲೂ ಕಾಡುತ್ತಿವೆ ಎಂದಿದ್ದಾನೆ ಕರಣ್.



# ಜಾಕ್ವೆಲಿನ್ 'ಶಕ್ತಿ' ಪ್ರದರ್ಶನ!



ನಾಯಕನಾದವನು ನಾಯಕಿಯನ್ನು ಎತ್ತುವುದು ಸಿನಿಮಾಗಳಲ್ಲಿ ಸಹಜ. ಅದಕ್ಕೆ ಅಪವಾದವೆಂಬಂತೆಯೂ ನಾಯಕಿ ನಾಯಕನನ್ನು ಎತ್ತಿರುವ ಸಿನಿಮಾಗಳೂ ಇವೆ. ಅಥವಾ ಅಂತಹ ಶಕ್ತಿಶಾಲಿ ನಟಿಯರೂ ಇದ್ದಾರೆ ಎನ್ನಬಹುದು. ಯಾವ ನಟನನ್ನು ಹೇಗೆ ಎತ್ತಬಹುದು ಎಂದು ಅಧ್ಯಯನ ಮಾಡಿದ ಬಳಿಕವಷ್ಟೇ ನಾಯಕಿಯರಿಗೆ ಈ 'ಅವಕಾಶ' ನೀಡಿರುತ್ತಾರೆ. ಈಗಂತೂ ಬಿಟೌನ್‌ನ ನಾಯಕರು ದೇಹ ಹುರಿಗಟ್ಟಿಸಿಕೊಳ್ಳುವುದರಲ್ಲಿ ಮುಂದು. ಹೀಗಿರುವಾಗ ಹೆವಿ ವೇಯ್ಟ್ ಕುಸ್ತಿಪಟುವಂತೆ ಕಾಣುವ ಜಾನ್ ಅಬ್ರಹಾಂನನ್ನು ಎತ್ತಲು ಹೋದರೆ? ಅಂತಹ ಸಾಹಸ ಮಾಡಲು ಹೋಗಿ ಸೊಂಟ ಉಳುಕಿಸಿಕೊಂಡಿದ್ದಾಳೆ ಜಾಕ್ವೆಲಿನ್ ಫರ್ನಾಂಡಿಸ್. ನಾಗಪುರದಲ್ಲಿ 'ಡಿಶೂಂ' ಚಿತ್ರದ ಪ್ರಚಾರ ನಡೆಯುತ್ತಿತ್ತು. ಜಾನ್ ಅಬ್ರಹಾಂ, ವರುಣ್ ಧವನ್ ಮತ್ತು ಜಾಕ್ವೆಲಿನ್ ಹುಮ್ಮಸ್ಸಿನಿಂದಲೇ ಅಭಿಮಾನಿಗಳೊಂದಿಗೆ ಬೆರೆತಿದ್ದರು. ಸಾಮಾನ್ಯವಾಗಿ ಪ್ರಚಾರವೆಂದಾಗ ಅಭಿಮಾನಿಗಳಿಗೆ ಒಂದಷ್ಟು ಮನರಂಜನೆ ನೀಡುವುದು ಮಾಮೂಲು. ಇಲ್ಲಿ ಅಭಿಮಾನಿಗಳೇ ಚಿತ್ರ ಬಳಗಕ್ಕೆ 'ಟಾಸ್ಕ್'ಗಳನ್ನು ನೀಡಿದ್ದರು. ಅದರಲ್ಲಿ ಜಾನ್ ಅಬ್ರಹಾಂನನ್ನು ಎತ್ತುವುದು ಸಹ ಒಂದು. 95 ಕೆ.ಜಿ. ತೂಕದ ಜಾನ್‌ನನ್ನು ವರುಣ್ ಸಲೀಸಾಗಿ ಎತ್ತಿದ್ದ. ತಾನೂ ಎತ್ತಬಲ್ಲೆ ಎಂಬ ಉತ್ಸಾಹದಿಂದ ಜಾಕ್ವೆಲಿನ್ ಹರಸಾಹಸಪಟ್ಟರೂ ಸಾಧ್ಯವಾಗಲಿಲ್ಲ. ಅಂದೇನೋ ಅಭಿಮಾನಿಗಳ ಜತೆ ನಕ್ಕು ನಲಿದಿದ್ದ ಜಾಕ್ವೆಲಿನ್‌ಗೆ ಅದರ ಪರಿಣಾಮ ಮರುದಿನ ಗೊತ್ತಾಗಿದ್ದಂತೆ. ಸೊಂಟದಲ್ಲಿ ಸಣ್ಣನೆ ಝಳುಕಷ್ಟೆ ಕಾಣಿಸಿಕೊಂಡಿದ್ದರಿಂದ ಆಕೆಗೆ ಹೆಚ್ಚೇನೂ ತೊಂದರೆಯಾಗಲಿಲ್ಲವಂತೆ.